ಕರ್ನಾಟಕ ವಿಧಾನ ಸಭೆ, ಸಂಶೋಧನೆ ಮತ್ತು ಉಲ್ಲೇಖ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ತೆರಿಗೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ        ದಿನಾಂಕ : DATE : 09/10/2019

# ಭಾರತಕ್ಕೆ ಬಂತು ಸ್ವಿಸ್ ಖಾತೆದಾರರ ಮಾಹಿತಿ

## ಕಾಳಧನದ ವಿರುದ್ಧದ ಹೋರಾಟಕ್ಕೆ ಭಾರತಕ್ಕೆ ಮೊದಲ ಯಶ

ಕ.ಪ್ರ 9/10/19

**ನವದೆಹಲಿ/ಬರ್ನ್:** ಕಪ್ಪುಹಣ ನಿಯಂತ್ರಿಸುವ ಭಾರತ ಸರ್ಕಾರದ ಯತ್ನಕ್ಕೆ ಮಹತ್ವದ ಯಶಸ್ಸು ಪ್ರಾಪ್ತಿಯಾಗಿದೆ. 'ಕಾಳಧನಿಕರ ಸ್ವರ್ಗ' ಎಂದೇ ಹೆಸರು ಪಡೆದಿರುವ ಸ್ವಿಜರ್ಲೆಂಡ್‌ನಿಂದ ಇದೇ ಮೊದಲ ಬಾರಿಗೆ ಸ್ವಿಸ್ ಬ್ಯಾಂಕ್ ಖಾತೆದಾರರ ಮಾಹಿತಿ ಲಭ್ಯವಾಗಿದೆ.

ಭಾರತ ಹಾಗೂ ಇತರ ದೇಶಗಳ ಜತೆ ಮಾಡಿಕೊಂಡ 'ಸ್ವಯಂಚಾಲಿತ ಮಾಹಿತಿ ವಿನಿಮಯ ಒಪ್ಪಂದ'ದ ಪ್ರಕಾರ, ಸ್ವಿಜರ್ಲೆಂಡ್‌ನ ಫೆಡರಲ್ ಟ್ಯಾಕ್ಸ್ ಆಡಳಿತ (ಎಫ್‌ಟಿಎ) ಇಲಾಖೆಯು ಸೋಮವಾರ ಭಾರತ ಸೇರಿದಂತೆ 75 ದೇಶಗಳ ಜತೆ ತನ್ನ ದೇಶದಲ್ಲಿರುವ ಬ್ಯಾಂಕ್ ಖಾತೆದಾರರ ಮಾಹಿತಿಯನ್ನು ಹಂಚಿಕೊಂಡಿದೆ. ಇದರಿಂದ ಈ ಖಾತೆದಾರರ ಖಾತೆಗಳಲ್ಲಿರುವ ಹಣವು ಕಾಳಧನವೇ ಅಥವಾ ಅದು ಸಕ್ರಮ ಹಣವೇ ಎಂಬುದನ್ನು ಪತ್ತೆ ಮಾಡಲು ಭಾರತಕ್ಕೆ ಸಾಧ್ಯವಾಗಲಿದೆ.

ಒಪ್ಪಂದದ ಅನುಸಾರ ವರ್ಷದ ಮೊದಲ 9 ತಿಂಗಳ ಒಳಗೆ ಮಾಹಿತಿ ಹಂಚಿಕೊಳ್ಳಬೇಕು. ಆ ಪ್ರಕಾರ ಸೆಪ್ಟೆಂಬರ್‌ವರೆಗಿನ ಸುಮಾರು 31 ಲಕ್ಷ ಖಾತೆಗಳ ಮಾಹಿತಿಯನ್ನು 75 ದೇಶಗಳಿಗೆ ಸೆಪ್ಟೆಂಬರ್ ಅಂತ್ಯಕ್ಕೆ ಕೊಡಲಾಗಿದೆ. ಮುಂದಿನ ಹಂತದ ಮಾಹಿತಿ ವಿನಿಮಯ 2020ರ ಸೆಪ್ಟೆಂಬರ್‌ನಲ್ಲಿ 90 ದೇಶಗಳೊಂದಿಗೆ ನಡೆಯಲಿದೆ ಎಂದು ಎಫ್‌ಟಿಎ ವಕ್ತಾರರು ಹೇಳಿದ್ದಾರೆ.

2018ಕ್ಕಿಂತ ಮುಂಚೆ ಇದ್ದ ಅಥವಾ ಮುಚ್ಚಲಾದ ಖಾತೆಗಳು ಹಾಗೂ ಈಗ ಸಕ್ರಿಯವಾಗಿರುವ ಖಾತೆಗಳ ವಿವರವನ್ನು ನೀಡಲಾಗಿದೆ. ಆದರೆ ಮಾಹಿತಿ ವಿನಿಮಯದ ವೇಳೆ ಗೌಪ್ಯತೆ ಕಾಪಾಡಿಕೊಳ್ಳಬೇಕು ಎಂಬ ಷರತ್ತು ಇದೆ. ಹೀಗಾಗಿ ಭಾರತಕ್ಕೆ ಎಷ್ಟು ಖಾತೆಗಳ ಮಾಹಿತಿಯನ್ನು ನೀಡಲಾಗಿದೆ? ಅವರ ಹೆಸರು ಏನು ಹಾಗೂ ಖಾತೆಯಲ್ಲಿ ಎಷ್ಟು ಠೇವಣಿ ಇದೆ ಎಂಬ ನಿಖರ ವಿವರಗಳನ್ನು ನೀಡಲು ವಕ್ತಾರರು ನಿರಾಕರಿಸಿದ್ದಾರೆ.

ಅಧಿಕೃತವಾಗಿ ಭಾರತೀಯರ ಹೆಸರಲ್ಲೇ ಇರುವ ಖಾತೆಗಳ ಮಾಹಿತಿ ಹಸ್ತಾಂತರಿಸಲಾಗಿದೆ. ಖಾತೆದಾರರ ಹೆಸರು, ಅವರ ವಿಳಾಸ, ತೆರಿಗೆ ಸಂಖ್ಯೆ, ಖಾತೆಯಲ್ಲಿನ ಮೊತ್ತದ ವಿವರ ವಿನಿಯಮ ಮಾಡಲಾಗಿದೆ.

**ಇದು ಕಾಳಧನವೇ? - ಈಗಲೇ ತಿಳಿಯದು:** 'ಆದರೆ ಅವು ನೈಜ ಉದ್ದೇಶಕ್ಕಾಗಿ ವ್ಯವಹರಿಸಿದ ಖಾತೆಗಳೇ ಆಗಿರಬಹುದು ಅಥವಾ ವ್ಯಾಪಾರ ಉದ್ದೇಶಕ್ಕೆ ವ್ಯವಹರಿಸಿದ ಖಾತೆಗಳೇ ಆಗಿರಬಹುದು. ಭಾರತ ಸರ್ಕಾರವು ಈ ಖಾತೆದಾರರ ಹೆಸರು ಹಾಗೂ ಅವರ ವಹಿವಾಟನ್ನು ಪರಿಶೀಲಿಸಿದಾಗ ಇದು ಅಕ್ರಮ ಹಣವೇ ಅಥವಾ ಘೋಷಿತ ಸಕ್ರಮ ಹಣವೇ ಎಂದು ತಿಳಿದುಬರಲಿದೆ' ಎಂದು ತಜ್ಞರು ಹೇಳಿದ್ದಾರೆ.

ಇನ್ನು ಕೆಲವು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಗಳು ಹೇಳುವಂತೆ, ಸ್ವಿಸ್ ಸರ್ಕಾರ ಹಸ್ತಾಂತರಿಸುರುವ ಬಹುತೇಕ ಮಾಹಿತಿ ಅಮೆರಿಕ, ಇಂಗ್ಲೆಂಡ್, ಆಫ್ರಿಕ, ದಕ್ಷಿಣ ಅಮೆರಿಕ ಅಥವಾ ಆಗ್ನೇಯ ಏಷ್ಯಾದಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರಿಗೆ ಸೇರಿದ್ದಾಗಿದೆ.

ಈ ನಡುವೆ, 2018ಕ್ಕಿಂತ ಮುಂಚೆ ಸುಮಾರು 100 ಭಾರತೀಯ ಖಾತೆದಾರರು ತಮ್ಮ ಖಾತೆಗಳನ್ನು ಕಾಳಧನದ ಮೇಲೆ ಭಾರತ ಸರ್ಕಾರ ಹೂಡಿದ ಸಮರದ ಭೀತಿಗೆ ಮುಚ್ಚಿಬಿಟ್ಟಿದ್ದಾರೆ. ಇವುಗಳ ಮಾಹಿತಿ ವಿನಿಮಯ ಪ್ರಕ್ರಿಯೆಯೂ ಭಾರತ ಸರ್ಕಾರದ ಕೋರಿಕೆಯ ಮೇರೆಗೆ ನೀಡುವ ಪ್ರಕ್ರಿಯೆ ನಡೆದಿದೆ. ಈ ಖಾತೆದಾರರು ಅಕ್ರಮ ಎಸಗಿರುವುದರ ಬಗ್ಗೆ ಮೇಲ್ನೋಟದ ಸಾಕ್ಷ್ಯವನ್ನು ಭಾರತ ಹಸ್ತಾಂತರಿಸಿತ್ತು ಎಂದು ಮೂಲಗಳು ಹೇಳಿವೆ.



1 ಒಪ್ಪಂದದ ಪ್ರಕಾರ ಇದೇ ಮೊದಲ ಬಾರಿ ಖಾತೆಗಳ ವಿವರ ಹಸ್ತಾಂತರ

2 ಆದರೆ ಎಷ್ಟು ಖಾತೆಗಳು, ಒಟ್ಟು ಠೇವಣಿ ಎಷ್ಟು ಎಂಬ ಮಾಹಿತಿ ಈಗ ಬಹಿರಂಗವಿಲ್ಲ

3 ಖಾತೆಯಲ್ಲಿನ ಹಣ ಕಾಳಧನವೇ ಎಂಬುದು ಪರಿಶೀಲನೆಯ ನಂತರ ನಿರ್ಧಾರ

4 ಭಾರತ ಸೇರಿ 75 ದೇಶಗಳ ಜತೆ ಈಗ ಮಾಹಿತಿ ವಿನಿಮಯ

5 ಮುಂದಿನ ವರ್ಷ ಮತ್ತೆ 90 ದೇಶಗಳ ಜತೆ ಮಾಹಿತಿ ಹಂಚಿಕೆ

4